ಆಯ್ತು." "ಅಬ್ಬಾ! ಫಸ್ಟ್ ಟೈಂ ಒಬ್ಬ ಹುಡುಗಿಗೆ ನನ್ನ ಸೆನ್ಸ್ ಆಫ್ ಹ್ಯೂಮರ್ ಅರ್ಥ ಆಯ್ತಲ್ಲಾ" ಅಂದ. "ಹುಡ್ಗೀ ಅಲ್ಲಾರೀ, ನಲವತ್ತಾಯ್ತು ನಂಗೆ. ಯಾಕೆ ಹೆಣ್ಣು ಮಕ್ಕಳಿಗೆ ಸೆನ್ಸ್ ಆಫ್ ಹ್ಯೂಮರ್ ಇರಲ್ವ" ಅಂದಳು. "ಇರೋರು ಸಿಕ್ಕಿದ್ರೆ ಇಷ್ಟು ಹೊತ್ತಿಗೆ ಮದುವೆ ಆಗಿರ್ತಿದ್ದೆ" ಅಂದ. ಅವಳು ನಿಟ್ಟುಸಿರು ಬಿಟ್ಟಳು.

"ಟೀ ಕುಡೀತೀರಾ" ಅಂದ. "ಬೇಡ, ಅದು ಸಕ್ಕರೆ ಸುರಿದಿರೋ ಬಿಸಿ ನೀರು. ನಾ ಮಾಡಿದ ಚಿಕನ್ ಬಿರಿಯಾನಿ ಟೇಸ್ಟ್ ನೋಡಿ" ಅಂತ ಮುಚ್ಚಳ ತೆಗೆಯುತ್ತಿದ್ದಂತೆ ಘಂ ಅಂತ ಹೊಮ್ಮಿದ ಪರಿಮಳಕ್ಕೆ "ನಿಮ್ಮ ಹಸ್ಬೆಂಡ್ ನಿಮ್ಮ ಅಡುಗೆ ತುಂಬಾ ಇಷ್ಟ ಪಡ್ತಾರೆ ಅನ್ಸತ್ತೆ... ಅಲ್ವಾ?" ಅಂದ. "ಖಂಡಿತಾ ಹೌದು, ಅಕಸ್ಮಾತ್ ನನ್ನ ಮದುವೆ ಆಗಿದ್ದಿದ್ರೆ!" ಅಂದ್ಲು. 'ಸದ್ಯ ಮದುವೆ ಆಗಿಲ್ಲ. ಅವಳ ಅಂದ, ಬಣ್ಣ, ಹೈಟು, ಕಾಳಜಿ, ಸೆನ್ಸ್ ಆಫ್ ಹ್ಯೂಮರ್ ಎಲ್ಲ ನಂಗೆ ಮ್ಯಾಚ್ ಆಗ್ತಾ ಇದೆ. ಶೀ ಈಸ್ ಎ ಪರ್ಫೆಕ್ಟ್ ಮ್ಯಾಚ್' ಅಂತ ತನ್ನ ಅಂತರಾತ್ಮ ಕಿರುಚಿ ಹೇಳುತ್ತಿದ್ದುದು ಊರಿಗೆಲ್ಲಾ ಕೇಳಿಸ್ತಾ ಇದ್ಯೇನೋ ಅನ್ನಿಸುತ್ತಿತ್ತು.

ಹೊರಗೆ ಎಡೆಬಿಡದೆ ಸುರಿಯುತ್ತಿರೋ ಮಳೆ, ಒಳಗೆ ಇವರಿಬ್ಬರ ಮಾತಿನ ಸುರಿಮಳೆ. "ನನಗೆ ಓದೋದು ಅಂದ್ರೆ ತುಂಬಾ ಇಷ್ಟ" ಅಂದ. "ನಂಗೂ ಅಷ್ಟೆ, ಒಂಟಿಯಾಗಿ ಕೂತು, ಕಾಫಿ ಹೀರುತ್ತಾ, ವುಡ್‌ಹೌಸ್ ಓದಿದರೆ ಕಾಫಿ ನೆತ್ತಿಗೆ ಹತ್ತುವಷ್ಟು ನಗಬಹುದು" ಅಂದಳು. "ಅವರ ವುಕ್ರೇಜ್ ಓದಿದ್ದೀರಾ?" ಅಂದ... ಸಂಭಾಷಣೆ ಮುಂದುವರಿಯಿತು. ಇಬ್ಬರಲ್ಲೂ ಅದೆಷ್ಟು ಸಾಮ್ಯತೆ! ಇಷ್ಟು ಹೊತ್ತಿಗಾಗಲೇ 6 ಗಂಟೆಗಳ ಪಯಣ ಸಾಗಿದೆ, ಆದರೆ ಇಬ್ಬರಿಗೂ ಸಮಯದ ಪರಿವೇ ಇಲ್ಲದೆ ತಮ್ಮದೇ ಲೋಕದಲ್ಲಿದ್ದಾರೆ. ಪ್ರತಿ ಮಾತಿನ ಕೊನೆಯಲ್ಲೂ "ನನಗೆ ಇವರೇ ಸರಿಯಾದ ಜೋಡಿ" ಅನ್ನೋ ಭಾವನೆ ಬಂದರೂ ಹೇಳದೆ ತಮ್ಮೊಳಗೇ ತೊಳಲಾಟ ಅನುಭವಿಸುತ್ತಿದ್ದಾರೆ. "ವಿಲ್ ಯು ಮ್ಯಾರಿ ಮೀ" ಅನ್ನೋ ನಾಲ್ಕು ಪದ ಹೇಳೋ ಧೈರ್ಯ ಇಬ್ಬರೂ ಮಾಡಲಿಲ್ಲ. ಹಠಾತ್ ಪರಿಚಯದ ಸಂಕೋಚವೋ, ಒಪ್ಪದಿದ್ದರೆ ಆಗುವ ನಿರಾಶೆಯ ಭಯವೋ, ಎಲ್ಲಾ ಸಹಜ ಭಾವಗಳು ಇಬ್ಬರ ಮನಸ್ಸಿನಲ್ಲಿ ನಾಗಾಲೋಟ ನಡೆಸಿವೆ. ಹೇಳಿ ಬಿಡೋಣ ಎನ್ನುವ ಭಾವನೆ ಮೂಡುತ್ತಿದೆಯಾದರೂ ಗಂಟಲಿಗೆ ಬಂದ ಮಾತು ಆಚೆ ಬರಲೇ ಇಲ್ಲ.

